**ಓ ಎಸ್ ನಂಃ176/2017**
**ಪಿ.ಡಬ್ಲ್ಯೂ -1.**
**ದಿನಾಂಕಃ 05.03.2024.**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಈ.ಪಿ. ವಕೀಲರಿಂದಃ</u>**

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಪ್ರತಿವಾದಿ 1 ಗಿರಿಯಪ್ಪನ ಮೇಲೆ ದಾವೆ ಸಲ್ಲಿಸಿರುತ್ತೇನೆ. ನಾನು ಪ್ರಮಾಣ ಪತ್ರದಲ್ಲಿ ಯಾವ ಸರ್ವೆ ನಂಬರ್ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂ.42/ಪಿ1, 2 ಎಕರೆ 20 ಗುಂಟೆ ಎಂದು ನಮೂದಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ್ ಮತ್ತು ವಿಸ್ತೀರ್ಣ ವನ್ನು ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ನಮೂದು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

2. ನಾನು ದಾವಾ ಸ್ವತ್ತನ್ನು ಗುತ್ತ್ಯಮ್ಮ ರವರಿಂದ ಖರೀದಿಸಿರುತ್ತೇನೆ. ನಾನು ಗುತ್ತ್ಯಮ್ಮ ರವರಿಂದ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಅವರ ತಂದೆ ಇದ್ದರು. ಗುತ್ತ್ಯಮ್ಮ ರವರು ಸದರಿ ದಾವಾ ಸ್ವತ್ತನ್ನು ಯರ್‍ರಪ್ಪ ರವರಿಂದ ಖರೀದಿಸಿರುತ್ತಾರೆ. ಸದರಿ ದಾವೆಯಲ್ಲಿ ಯರ್‍ರಪ್ಪ ರವರ ಯಾವುದೇ ವಂಶಸ್ಥರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಗುತ್ತ್ಯಮ್ಮ ನವರು ಗಿರಿಯಪ್ಪ ನವರಿಂದ ಸದರಿ ಆಸ್ತಿಯನ್ನು ಖರೀದಿಸಿಲ್ಲ. ನಾನು ಸದರಿ ಸ್ವತ್ತನ್ನು ಖರೀದಿಸುವ ಸಂದರ್ಬದಲ್ಲಿ ಎಂ ಆರ್ ನಂಬರ್ ಗುತ್ತ್ಯಮ್ಮ ನವರ ಹೆಸರಿನಲ್ಲಿಯೇ ಇತ್ತು. ಸದರಿ ಸ್ವತ್ತಿನ ಎಂ. ಆರ್ ಗುತ್ತ್ಯಮ್ಮ ನವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಎಂ.ಆರ್. ನಂಬರ್ 3/1983-84 ರದ್ದಾಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದಿರುತ್ತಾರೆ. ಹಾಗೇಯೇ ಐ ಎಸ್ ಸಿ ಪ್ರಕಾರ ನಂ.1/83-84 ಪ್ರಕಾರ ಸಹ ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳು ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ಅವರು ತೊಂದರೆ ನೀಡಿದ ಕಾರಣವೇ ನಾನು ದಾವೆ ಸಲ್ಲಿಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.